**<u>ದಿನಾಂಕಃ 06-06-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಕೆ.ಕೆ. ವಕೀಲರಿಂದಃ</u>**

ನಾನು ನನ್ನ ಪ್ರತಿವಾದ ಪತ್ರವನ್ನು ತಯಾರಿಸಲು ಮಾಹಿತಿಯನ್ನು ನಾನೇ ಒದಗಿಸಿದ್ದೆ. ನನ್ನ ತಿದ್ದುಪಡಿ ಪ್ರತಿವಾದ ಪತ್ರವನ್ನು ತಯಾರಿಸಲು ಮಾಹಿತಿಯನ್ನು ಸಹ ನಾನೇ ಒದಗಿಸಿದ್ದೆ. ಗೇಮಪ್ಪ ಅಲಿಯಾಸ್ ಗೇಮಣ್ಣ ತಂದೆ ರಾಮಪ್ಪ ಲಮಾಣಿರವರು ನನ್ನ ತಂದೆಯ ತಂದೆ ಆಗಿರುತ್ತಾರೆ. ನನ್ನ ತಂದೆಯನ್ನು ಸದರಿ ಗೇಮಪ್ಪ ರಾಮಪ್ಪ ಲಮಾಣಿರವರು ನನ್ನ ತಂದೆ ಚಿಕ್ಕವರಿದ್ದಾಗಿದ್ದರಿಂದ ಅವರನ್ನು ಅವರ ಮಗನೆಂದು ಸಾಕಿದ್ದರು ಎನ್ನುತ್ತಾರೆ. ಸದರಿ ಗೇಮಪ್ಪ ರಾಮಪ್ಪ ಲಮಾಣಿರವರು ನನ್ನ ತಂದೆಯನ್ನಾಗಲಿ ಅಥವಾ ಬೇರೆಯವರನ್ನಾಗಲಿ ತಮ್ಮ ಮಗನೆಂದು ಸಾಕಿರಲಿಲ್ಲ ಎಂದರೆ ಸರಿಯಲ್ಲ. ನನಗಾಗಲಿ ನನ್ನ ಸಹೋದರ ಸಹೋದರಿಯಾಗಲಿ ಹಾಗೂ ನನ್ನ ತಂದೆಗಾಗಲಿ ಸದರಿ ಗೇಮಪ್ಪ ರಾಮಪ್ಪ ಲಮಾಣಿರವರ ಆಸ್ತಿಯಲ್ಲಿ ಯಾವುದೇ ಹಕ್ಕು ಪ್ರಾಪ್ತ ಆಗಿಲ್ಲ ಎಂದರೆ ಸರಿಯಲ್ಲ. ನಾನು ಹೇಗಾದರೂ ಮಾಡಿ ದಾವಾ ಸ್ವತ್ತುಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ತಕರಾರು ಸಲ್ಲಿಸಿ ಅದಕ್ಕೆ ಪೂರಕವಾಗುವಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.